

ದೂರದರ್ಶನಗಳಲ್ಲಿ ಹಲವಾರು ಕಛೇರಿಗಳನ್ನು ಅಪರೂಪದ ಹಾಗೂ ಹೆಚ್ಚು ಬಳಕೆಯಲ್ಲಿಲ್ಲದ ನಟ ಬಿಹಾಗ್, ಗೋಧಾನ್ ಗೌರಿ, ರಾಮದಾಸಿ ಮಲ್ಹಾರ್, ಮಾಲವಿ, ನಾಯಕಿ ಕಾನಡಾ, ಜೈತ್ ಕಲ್ಯಾಣ, ಬಹಾದ್ದೂರ್ ತೋಡಿ ಮುಂತಾದ ರಾಗಗಳನ್ನು ಹಾಡುವ ಮೂಲಕ ಇತರ ಕಲಾವಿದರಿಗಿಂತ ಭಿನ್ನರಾಗಿ ಗುರ್ತಿಸಿಕೊಂಡವರು.

ಸುಮಾರು ಐದು ವರ್ಷಗಳಷ್ಟು ಹಿಂದಿನ ಮಾತು. ಪಂ. ರಾಜಶೇಖರ ಮನ್ಸೂರ್ ಅವರನ್ನು ಸಂದರ್ಶನ ಮಾಡಲೆಂದು ನಾನು ಅವರ ಮನೆಗೆ ಹೋಗಿದ್ದೆ. ಮೊದಲೇ ಫೋನ್ ಮಾಡಿ ತಿಳಿಸಿದ್ದರಿಂದ ಅವರು ಅಂದು ಬೆಳಗ್ಗಿನ ಸಂಗೀತ ಪಾಠಗಳನ್ನು ರದ್ದು ಮಾಡಿ ಕಾಯುತ್ತಿದ್ದರು. ಮನೆಗೆ ಹೋದ ಕೂಡಲೇ ಅವರು ಹಾಗೂ ಅವರ ಪತ್ನಿ ಕೋಮಲ ಆತ್ಮೀಯವಾಗಿ ಸ್ವಾಗತಿಸಿದರು. ಕೋಲು ಮುಖದ ಮಾಗಿದ ಶಾರೀರದ ಪಂ. ರಾಜಶೇಖರ ಮನ್ಸೂರ್ ಅವರನ್ನು ನೋಡಿದ ಕೂಡಲೇ ಅವರ ಸಾತ್ವಿಕ ಸ್ವಭಾವ, ಜೀವನಾನುಭವ ಹಾಗೂ ಸಂಗೀತದಲ್ಲಿ ಪರಿಪಕ್ವವಾಗಿರುವುದು ಸಾಬೀತಾಯಿತು. ಅಷ್ಟು ಹೊತ್ತಿಗೆ ಶುರುವಾದ ಅವರ ಸಂಗೀತ ಯಾನದ ಕುರಿತ ಮಾತುಕತೆ ಸುಮಾರು ಎರಡು ಗಂಟೆಗಳ ಕಾಲ ನಡೆಯಿತು.

ಶಾಸ್ತ್ರೀಯ ಸಂಗೀತ ಕಲಿಯುವುದು, ಕಲಿಸುವುದು, ಅಭ್ಯಾಸ, ಅಪರೂಪದ ರಾಗಗಳು, ರಾಗಗಳ ಅಧ್ಯಯನ, ತಾನ್‌ಗಳ ಪ್ರಸ್ತುತಿ, ಪ್ರಯೋಗಶೀಲತೆ, ಕಲಾವಿದನ ಮನೋಧರ್ಮ... ಹೀಗೆ ಹತ್ತು ಹಲವು ವಿಚಾರಗಳ ಬಗ್ಗೆ ನಿರರ್ಗಳವಾಗಿ ಮಾತನಾಡಿದರು. ಜೊತೆಗೆ ಅವರ ತಂದೆ ಪಂ. ಮಲ್ಲಿಕಾರ್ಜುನ ಮನ್ಸೂರ್ ಅವರೊಂದಿಗೆ ಸಹಗಾಯನ ನಡೆಸುತ್ತಿದ್ದ ರೀತಿ, ರಿಯಾಜ್‌ನ ಕಟ್ಟುನಿಟ್ಟು, ತಂದೆಯವರು ಕಿಡ್ನಿ ಸಮಸ್ಯೆಯಿಂದ ಬಳಲುತ್ತಿದ್ದದ್ದು, ಅವರ ಸಂಕಷ್ಟ ಕಂಡು, ಕಿಡ್ನಿ ಸಮಸ್ಯೆ ಇದ್ದವರಿಗೆ ಸಹಾಯಧನ ಒದಗಿಸಲೆಂದೇ ಇವರು 'ಬಿಕೆಎಫ್ ಫೌಂಡೇಶನ್' ಎಂಬ ಚಾರಿಟಬಲ್ ಟ್ರಸ್ಟ್ ಆರಂಭಿಸಿದ ವಿಚಾರಗಳನ್ನೂ ಸವಿಸ್ತಾರವಾಗಿ ವಿವರಿಸಿದರು. ಅಷ್ಟು ಹೊತ್ತು ಸಂಗೀತದ ಬಗ್ಗೆ ಮಾತನಾಡಿದರೂ ಆ ಇಳಿವಯಸ್ಸಿನಲ್ಲೂ ಅವರ ಜೀವನೋತ್ಸಾಹ ಎದ್ದುಕಾಣುತ್ತಿತ್ತು.

ಪಂ. ಮನ್ಸೂರ ಅವರ ಮನೆಯಲ್ಲಿ ಸ್ವರಪೂಜೆ ಸದಾ ನಡೆಯುತ್ತಿತ್ತು. ಇದೊಂದು 'ಶ್ರವಣ ವಿದ್ಯೆ'. ತಂದೆ ದಿನಾ ಹಾಡ್ತಿದ್ದದ್ದನ್ನು ಕೇಳಿ ಕೇಳಿ ಸ್ವರ, ರಾಗ, ಲಯ, ಛಾಯೆ ಎಲ್ಲವನ್ನೂ ಚಾಚೂ ತಪ್ಪದೆ ಅಭ್ಯಾಸ ಮಾಡುತ್ತಿದ್ದ ರಾಜಶೇಖರ್, ಅದನ್ನೇ ಅನುಕರಣೆ ಕೂಡ ಮಾಡುತ್ತಿದ್ದರು. ಸಂಗೀತವನ್ನು ಮನನ–ಚಿಂತನ–ಮಂಥನ – ಈ ಮೂರು ಆಯಾಮಗಳಿಂದ ಕಲಿತರೆ ಖಂಡಿತಾ ಈ ಕ್ಷೇತ್ರದಲ್ಲಿ ಯಶಸ್ಸು ಸಾಧ್ಯ ಎಂಬುದನ್ನು ಅವರು ಚಿಕ್ಕ ವಯಸ್ಸಿನಲ್ಲೇ ಅರ್ಥೈಸಿಕೊಂಡಿದ್ದರು. 'ಸ್ವರಗಳು ದೇವತೆ ಇದ್ದಂತೆ. ಅವು ಮನಸ್ಸಿನಲ್ಲಿ ಗಾಢವಾಗಿ ಅಚ್ಚೊತ್ತುವವರೆಗೂ ಕೈಬಿಡಬೇಡ' ಎಂದು ತಂದೆಯವರು ಹೇಳುತ್ತಿದ್ದ ಮಾತನ್ನು ಎಂದಿಗೂ ಇವರು ಮರೆತಿರಲಿಲ್ಲ. ಈ ಸಂಸ್ಕಾರವೇ ಪಂ. ರಾಜಶೇಖರ್ ಅವರನ್ನು ಸಂಗೀತದ ಉತ್ತುಂಗಕ್ಕೆ ಕೊಂಡೊಯ್ದಿತು.

ಪಂ. ರಾಜಶೇಖರ್ ಅವರು ಎಷ್ಟೇ ಸೊಗಸಾಗಿ ಹಾಡಿದರೂ ಅವರ ತಂದೆ ಯಾವತ್ತೂ ಚೆನ್ನಾಗಿ ಹಾಡಿದ್ದಿ ಅಂತ ಹೇಳುತ್ತಲೇ ಇರಲಿಲ್ಲವಂತೆ. ಒಂದೇ ಒಂದು ಸಲ 'ನೀನು ಫಸ್ಟ್ ಕ್ಲಾಸ್ ಹಾಡಿದ್ದಿ' ಎನ್ನಲಿಲ್ಲವಂತೆ. ಇನ್ನೂ ಧೋಲೊ ಹಾಡ್ಬೇಕು, ಇನ್ನೂ ಮೆಹನತ್ ಮಾಡು, 'ಮೆಹನತ್ ಕಿ ಫಲ್ ಮೀಟಾ ಹೋತಾ ಹೈ' ಅಂತಲೇ ಹೇಳುತ್ತಿದ್ದರಂತೆ.

ಎಲ್ಲ ಘರಾಣಗಳಲ್ಲೂ ಸ್ವಂತಿಕೆ ಇರುತ್ತದೆ. ಇದು ಕಲಾವಿದನ ಮನೋಧರ್ಮವನ್ನು ತೋರಿಸುತ್ತದೆ. ಇವೆಲ್ಲವನ್ನೂ ಶಿಸ್ತುಬದ್ಧವಾಗಿ ಪಾಲಿಸಿದ್ರೆ 'ದೇವರ ದರ್ಶನ' ಆದ ಹಾಗೆ 'ರಾಗ ದರ್ಶನ' ಆಗುತ್ತದೆ ಎಂಬುದನ್ನು ಪಂ. ರಾಜಶೇಖರ್ ಮನ್ಸೂರ್ ಪ್ರಾಯೋಗಿಕವಾಗಿ ತೋರಿಸಿಕೊಟ್ಟು 'ಜೈಪುರ ಅತ್ರೌಲಿ ಗಾಯಕಿ' ಯಲ್ಲಿ ವಿರಳಾತಿ ವಿರಳ ಕಲಾವಿದರೆನಿಸಿಕೊಂಡರು.

ದೇಶಿ ಜ್ಞಾನ ಪರಂಪರೆಯ ಬಗ್ಗೆ, ಭಾರತೀಯತೆಯ ಬಗ್ಗೆ ಅವರು ಅಪಾರ ಪ್ರೀತಿ, ಗೌರವ ಇಟ್ಟುಕೊಂಡಿದ್ದರು. ಈ ನೆಲದ ಸೊಗಡು ಅವರ ಉಸಿರಾಗಿತ್ತು.

ಪ್ರತಿಕ್ರಿಯಿಸಿ: feedback@sudha.co.in

## ಬಿಕೆಎಫ್ ಫೌಂಡೇಷನ್

ಪಂ. ಮಲ್ಲಿಕಾರ್ಜುನ ಮನ್ಸೂರ ಅವರಿಗೆ ಕಿಡ್ನಿ ತೊಂದರೆ ಇತ್ತು. ಅವರು ಬೆಂಗಳೂರಿಗೆ ಬಂದು ಡಯಾಲಿಸಿಸ್ ಮಾಡಿಸುತ್ತಿದ್ದರು. ಇಲ್ಲಿ ಬರುವ ಬಡರೋಗಿಗಳಿಗೆ ಸಹಾಯ ಆಗಲಿ ಎಂದು 'ಬಿಕೆಎಫ್ ಫೌಂಡೇಷನ್' ಎಂಬ ಚಾರಿಟಬಲ್ ಟ್ರಸ್ಟ್ ಅನ್ನು ಪಂ. ರಾಜಶೇಖರ ಮನ್ಸೂರ ಅವರೇ ಆರಂಭಿಸಿದ್ದರು. ಇದರ ವತಿಯಿಂದ ಪ್ರತಿ ವರ್ಷ ಸಂಗೀತೋತ್ಸವ ಏರ್ಪಡಿಸಿ ಬಡವರ ಸಹಾಯ ನಿಧಿಗೆ ಹಣ ಸಂಗ್ರಹ ಮಾಡುತ್ತಿದ್ದರು. ಧಾರವಾಡದಲ್ಲೂ ಪಂ. ಮಲ್ಲಿಕಾರ್ಜುನ ಮನ್ಸೂರ್ ಮ್ಯೂಸಿಕ್ ಟ್ರಸ್ಟ್ ಸ್ಥಾಪಿಸಿ ಪ್ರತಿವರ್ಷ ಸಂಗೀತೋತ್ಸವ ನಡೆಸುತ್ತಿದ್ದರು.

ಪಂ. ಮಲ್ಲಿಕಾರ್ಜುನ ಮನ್ಸೂರ್ ರಾಷ್ಟ್ರೀಯ ಪ್ರಶಸ್ತಿಯನ್ನೂ ಸ್ಥಾಪಿಸಿ ಪ್ರತಿಭಾವಂತ ಕಲಾವಿದರನ್ನು ಪುರಸ್ಕರಿಸುತ್ತಿದ್ದರು. ಬಾಲಮುರಳಿಕೃಷ್ಣ, ಹರಿಪ್ರಸಾದ್ ಚೌರಾಸಿಯ, ಅಮ್ಜದ್ ಅಲಿಖಾನ್ ಮುಂತಾದ ದಿಗ್ಗಜರಿಗೆ ಈ ಪ್ರಶಸ್ತಿ ನೀಡಿ ಗೌರವಿಸಿದ್ದರು. ಯುವ ಪುರಸ್ಕಾರವನ್ನೂ ನೀಡುತ್ತಿದ್ದರು.

## ಪ್ರಶಸ್ತಿಗಳ ಮೋಹ ಇರಲಿಲ್ಲ

ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಕಲಾಶ್ರೀ ಪ್ರಶಸ್ತಿ, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಪ್ರಶಸ್ತಿ ಸೇರಿದಂತೆ ಅನೇಕ ಪುರಸ್ಕಾರಗಳು ಪಂ. ರಾಜಶೇಖರರಿಗೆ ಸಂದಿದ್ದವು. ಆದರೆ, ಪ್ರಶಸ್ತಿಗಳ ಮೇಲೆ ಅವರಿಗೆ ಮೋಹ ಇರಲಿಲ್ಲ. 'ಪ್ರಶಸ್ತಿ ಪಡೆಯುವುದರಿಂದ ಗಾಯನ ಹೆಚ್ಚಾಗುತ್ತಾ? ಅಥವಾ ಪ್ರಶಸ್ತಿ ಸಿಗದಿದ್ರೆ ಗಾಯನದ ಗುಣಮಟ್ಟ ಕಡಿಮೆ ಆಗುತ್ತಾ? ಹಿಂದೆ ಕಲಾವಿದರು ಪ್ರಶಸ್ತಿಗಾಗಿ ಹಾಡ್ತಿದ್ರಾ? ತಮ್ಮ ಸುಖ ಸಂತೋಷಕ್ಕಾಗಿ ಹಾಡ್ತಿದ್ರು' ಎನ್ನುತ್ತಿದ್ದರು.

ಘರಾಣೆಯಲ್ಲಿ ವೈವಿಧ್ಯಮಯವಾದ ರಾಗಗಳ ಕಣಜವೇ ಇದೆ. ಅವುಗಳಲ್ಲಿ ಜೋಡ್ ರಾಗ, ಸಂಕೀರ್ಣ ರಾಗ, ಅಪ್ರಚಲಿತ ರಾಗಗಳಿವೆ. ಆ ರಾಗಗಳನ್ನು ಕಲಿಸುವುದರ ಜೊತೆಗೆ 'ಗಾಯಕಿ' ಶೈಲಿಯನ್ನು ಮನದಟ್ಟು ಮಾಡಿಕೊಡಲು ಆದ್ಯತೆ ನೀಡುತ್ತಿದ್ದರು. ಗಾಯಕಿ ಶೈಲಿಯನ್ನು ಕರಗತ ಮಾಡಿಕೊಂಡರೆ ರಾಗಗಳು ಸಹಜವಾಗಿ ದಕ್ಕುತ್ತವೆ ಎಂಬುದು ಅವರ ಬಲವಾದ ನಂಬಿಕೆಯಾಗಿತ್ತು. ರಾಗಗಳ ಆಯ್ಕೆ, ರಾಗದ ಸಹಜ ಬೆಳವಣಿಗೆ, ಗಾಯನ ಪ್ರಸ್ತುತಿಯ ಸಂದರ್ಭದಲ್ಲಿ ನಿಖರ ಸ್ವರ ಹಚ್ಚುವುದರಿಂದ ರಾಗವು ಎಂಥ ಪ್ರಾಮುಖ್ಯತೆ ಪಡೆಯುತ್ತದೆ ಎನ್ನುವುದನ್ನು ನನಗೆ ಮನವರಿಕೆ ಮಾಡಿ ಕೊಡುತ್ತಿದ್ದರು.

◆ **ದೇವರ ದರ್ಶನದಂತೆ ರಾಗದರ್ಶನ ಆಗಬೇಕು ಎನ್ನುವುದು ಅವರ ಅಭಿಪ್ರಾಯವಾಗಿತ್ತು. ಈ ಮಾತನ್ನು ಕಾರ್ಯರೂಪಕ್ಕೆ ತರುತ್ತಿದ್ದ ರೀತಿ ಹೇಗಿತ್ತು?**

ಪಂ. ಮಲ್ಲಿಕಾರ್ಜುನ ಮನ್ಸೂರ್ ಅವರ ಗಾಯನ ದೈವಿ ಸ್ವರೂಪ ಪಡೆದಿತ್ತು. ಪಂ. ರಾಜಶೇಖರ ಅವರು ಆ ದೈವಿಕ ಗಾಯನ ಶೈಲಿಯನ್ನು ಸಂಪೂರ್ಣವಾಗಿ ತಮ್ಮದಾಗಿಸಿಕೊಂಡಿದ್ದರು. ಆ ತಾದಾತ್ಮ್ಯ ಯಾವ ಮಟ್ಟದಲ್ಲಿತ್ತೆಂದರೆ, ಅಪ್ಪ–ಮಗ ಒಟ್ಟಿಗೆ ಹಾಡುತ್ತಿದ್ದರೆ ಧ್ವನಿ ವ್ಯತ್ಯಾಸವೇ ಗೊತ್ತಾಗುತ್ತಿರಲಿಲ್ಲ. ಕೇವಲ ಸಂಗೀತಶಾಸ್ತ್ರ ಮತ್ತು ಸ್ವರಗಳಿಂದ ರಾಗಗಳು ನಿರ್ಮಾಣವಾಗುವುದಿಲ್ಲ. ಭಾವಗಳಿಂದ ರಾಗಗಳು ಜೀವ ಪಡೆಯುತ್ತವೆ ಎಂದು ಅವರು ಯಾವತ್ತೂ ಹೇಳುತ್ತಿದ್ದರು.

ಜೈಪುರ್ ಅತ್ರೌಲಿ ಘರಾಣೆಯ ದಿಗ್ಗಜ ಪಂ. ಮಲ್ಲಿಕಾರ್ಜುನ ಮನ್ಸೂರ್ ಅವರ ಸುಪುತ್ರನಾಗಿ ಘನಂದಾರ ಸಂಗೀತ ಮತ್ತು ವ್ಯಕ್ತಿತ್ವವನ್ನು ಹೊಂದಿದ್ದರು. ಹಾಗಾಗಿ ಅವರ 'ಗಾಯಕಿ' ಗಾಯನಶೈಲಿ ಅಪ್ಪಟ ಜೈಪುರ ಅತ್ರೌಲಿ ಘರಾಣ ಪರಂಪರೆಗೆ ಸೇರಿದ್ದಾಗಿತ್ತು.